(ಪ್ರಾ.ಸಾ. 1 / ಚಾ.ಸಾ.1)

6ನೇ ಆರೋಪಿಯ ವಿರುದ್ದ ಪ್ರಕರಣ ಇತ್ತೀಚೆಗೆ ಕಮಿಟಲ್ ಆಗಿರುವುದರಿಂದ ಆತನ ವಿರುದ್ದದ ಸಾಕ್ಷಿಗಾಗಿ ಸಾಕ್ಷಿಯನ್ನು ದಿನಾಂಕಃ 01-08-2019 ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಆ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಸಹ ಇದ್ದ ಆತನನ್ನು ನಾನು ಪೋಲೀಸ್ ಠಾಣೆಯಲ್ಲಿ ಸಹ ಗುರುತಿಸಿರುತ್ತೇನೆ.

**ಪಾಟೀ ಸವಾಲುಃ ಎಂ. ಇ ಎಂ 6ನೇ ಆರೋಪಿ ಪರ ವಕೀಲರಿಂದ ಃ**

ನನಗೆ ಓದಲು ಬರೆಯಲು ಬರುತ್ತದೆ. ದೂರನ್ನು ನಾನು ಬರೆದಿಲ್ಲ, ಪೋಲೀಸರು ದೂರನ್ನು ಬರೆದಿದ್ದಾರೆ. ನಾನು ಚಾ.ಸಾ 2ರವರ ಬಳಿ ಇಲ್ಲಿಗೆ 4 ವರ್ಷಗಳಿಂದ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಚಾ.ಸಾ 2ರವರ ಬಳಿ ಕೆಲಸ ಮಾಡುತ್ತಿದ್ದೇನೆ ಎನ್ನುವ ಬಗ್ಗೆ ಪೋಲೀಸರಿಗೆ ದಾಖಲೆ ಕೊಟ್ಟಿಲ್ಲ, ನಾನು ಮರಳು ಲಾರಿಯಲ್ಲಿ ಸಾಗಿಸುತ್ತೇನೆ ಎನ್ನುವ ಬಗ್ಗೆ ಪೋಲೀಸರಿಗೆ ದಾಖಲೆ ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಆ ಬಗ್ಗೆ ಪರ್ಮಿಟ್ ಲಾರಿಯಲ್ಲಿತ್ತು ಅದನ್ನು ಆರೋಪಿಗಳು ನಾಶ ಮಾಡಿದ್ದಾರೆ ಎಂದು ನುಡಿದಿದ್ದಾರೆ. ಆ ರೀತಿ ಮರಳು ಸಾಗಣೆ ಮಾಡುವ ಬಗ್ಗೆ ದಾಖಲೆಗಳೆಲ್ಲಾ ಪರ್ಮಿಟರ್ ಜೊತೆಯಲ್ಲೇ ಇತ್ತು, ನಾನು ಮರಳು ಸಾಗಣೆಯನ್ನು ವಾರಕೊಮ್ಮೆ ಮಾಡುತ್ತಿದ್ದೆ. ಆ ಬಗ್ಗೆ ಪೋಲೀಸರಿಗೆ ದಾಖಲೆ ಕೊಟ್ಟಿಲ್ಲ, ನಾನು ಸಾಮಾನ್ಯವಾಗಿ ಸರ್ಜಾಪುರದಿಂದ ಗೊಲ್ಲರಹಟ್ಟಿ ಮತ್ತು ಇತರೇ ಸ್ಥಳಗಳಿಗೆ ಮರುಳು ಸಾಗಣೆ ಮಾಡುತ್ತೇನೆ. ಪ್ರತಿ ದಿನ ಮರಳು ಸಾಗಾಣೆ ಮಾಡುವ ಸಂದರ್ಭದಲ್ಲಿ ನೈಸ್ ರಸ್ತೆಯಲ್ಲೇ ಪ್ರಯಾಣಿಸುತ್ತೇನೆ. ನೈಸ್ ರೋಡ್ ಪ್ರವೇಶಿಸಬೇಕಾದರೆ ಟೋಲ್ ರಸೀದಿ ಕೊಡುತ್ತಾರೆ ಎನ್ನುವುದು ಸರಿ. ಆ ರಶೀದಿಯನ್ನು ಪೋಲೀಸರಿಗೆ ಕೊಟ್ಟಿಲ್ಲ ಕಾರಣ ಅದು

ಲಾರಿಯಲ್ಲೇ ಇತ್ತು, ಕಂಪ್ಲೆಂಟ್‌ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ. ದೂರಿನಲ್ಲಿ ಟೋಲ್ ರಶೀದಿಯನ್ನು ಲಾರಿಯಲ್ಲೇ ಇಟ್ಟಿದ್ದೆ ಅದನ್ನು ಆರೋಪಿಗಳು ತೆಗೆದುಕೊಂಡು ಹೋಗಿದ್ದಾರೆ ಎಂದು ಪೋಲೀಸರಿಗೆ ಹೇಳಿಲ್ಲ, ಪೋಲೀಸರಿಗೆ ಮರಳು ಸಾಗಣೆ ಬಗ್ಗೆ ಯಾವುದೇ ರಶೀದಿ ಕೊಟ್ಟಿಲ್ಲ, ಸಾಮಾನ್ಯವಾಗಿ ಲಾರಿಯನ್ನು ಗೊಲ್ಲರಹಟ್ಟಿಯ ನೈಸ್ ರಸ್ತೆಯಲ್ಲಿ ನಿಲ್ಲಿಸುತ್ತೇನೆ . ಆ ಸ್ಥಳದಲ್ಲಿ ನಮ್ಮ ಮಾಲೀಕರ ಯಾವುದೇ ಅಂಗಡಿ ಇಲ್ಲ, ಸಾಮಾನ್ಯವಾಗಿ ನಾನು ಒಂದೇ ಸಮಯದಲ್ಲಿ ಮರುಳು ಸಾಗಣೆ ಮಾಡಲು ಹೋಗುವುದಿಲ್ಲ, ಬೇರೆ ಬೇರೆ ಸಮಯದಲ್ಲಿ ಹೋಗುತ್ತೇನೆ . ನನ್ನ ಲಾರಿಗೆ ಯಾವುದೇ ಕ್ಲೀನರ್ ಇರುವುದಿಲ್ಲ, ಆ ದಿನ ಗೊಲ್ಲರಹಟ್ಟಿಯನ್ನು ಸಂಜೆ 6 ಗಂಟೆಗೆ ಬಿಟ್ಟಿದ್ದೇನೆ . ಆ ದಿನ ಮರಳನ್ನು ಸರ್ಜಾಪುರದಲ್ಲಿ ಲಾರಿಗೆ ತುಂಬಿದ್ದ, ನಾನು ಹೊಳೆ ಮರಳನ್ನೇ ತುಂಬುತ್ತೇನೆ. ಗೊಲ್ಲರಹಟ್ಟಿಯಿಂದ ಸರ್ಜಾಪುರ ತಲುಪಲು ಸುಮಾರು 1ವರೆ ಗಂಟೆ ಸಮಯ ಬೇಕಾಗುತ್ತದೆ. ಟೋಲ್‌ನಿಂದ ಸ್ವಲ್ಪ 50 ಮೀಟರ್ ದೂರದಲ್ಲಿ ಹೊಟೆಲ್‌ನಿಂದ ಊಟ ಪಾರ್ಸೇಲ್ ತೆಗೆದುಕೊಂಡೆ. ಆ ಟೋಲ್‌ನ ರಶೀದಿ ಪಡೆದುಕೊಂಡ ನಂತರ ನಾನು ಲಾರಿಯನ್ನು ಪಾರ್ಕ್ ಮಾಡಿದ್ದೇನೆ. ಟೋಲ್‌ನ ಬಳಿ ಲಾರಿ ನಿಲ್ಲಿಸಲು ಜಾಗ ಇರುವುದಿಲ್ಲ ಎನ್ನುವುದು ಸರಿಯಲ್ಲ, ಟೋಲ್‌ನಿಂದ 50 ಮೀಟರ್ ದೂರದ ವರೆಗೂ ಲಾರಿಗಳನ್ನು ನಿಲ್ಲಿಸಬಹುದು. ಆ ದಿನ ನನ್ನ ಲಾರಿಯ ಹಿಂಬಾಗದಲ್ಲಿ ಬೇರೆ ಲಾರಿಗಳು ನಿಂತಿದ್ದವು ಎಷ್ಟಿದ್ದವು ಎಂದು ಗಮನಿಸಿಲ್ಲ ಅದರೆ ನನ್ನ ಲಾರಿಯ ಮುಂದೆ ಬೇರೆ ಲಾರಿಗಳು ಇರಲಿಲ್ಲ, ಆ ಹಿಂದೆ ಇದ್ದಂತಹ ಲಾರಿಗಳಲ್ಲಿ ಚಾಲಕ ಅಥವಾ ಕ್ಲೀನರ್ ಇದ್ದುದ್ದನ್ನು ನಾನು ಗಮನಿಸಿಲ್ಲ . ಲಾರಿ ಚಾಲಕ ಅಥವಾ ಕ್ಲೀನರ್ ಆಗಲಿ ಲಾರಿಯಲ್ಲೇ ಮಲಗಿಕೊಳ್ಳಬೇಕು ಪ್ರತ್ಯೇಕ ವ್ಯವಸ್ಥೆ ಇರುವುದಿಲ್ಲ, ನಾನು ಲಾರಿ ಪಾರ್ಕ್ ಮಾಡಿದ ಸ್ಥಳದಲ್ಲಿ ಬೆಳಕಿನ ವ್ಯವಸ್ಥೆ ಇತ್ತು, ನೈಸ್ ರಸ್ತೆಯಲ್ಲಿ ಬೇರೆ ವಾಹನಗಳು ಓಡಾಡುತ್ತಿರುತ್ತವೆ ಎನ್ನುವುದು ಸರಿ. ಆ ದಿನ ಬಂದಿದ್ದಂತಹ ವ್ಯಕ್ತಿಗಳನ್ನು ನೋಡಿದ್ದೇನೆ ಆದರೆ ಅವರು ಧರಿಸಿದ ಬಟ್ಟೆಗಳ ಬಣ್ಣಗಳನ್ನು ಸರಿಯಾಗಿ ಗಮನಿಸಲಿಲ್ಲ, ನಾನು ನನ್ನ ದೂರಿನಲ್ಲಿ ಸದರಿ ವ್ಯಕ್ತಿಗಳ ಮುಖ ಚಹರೆಗಳನ್ನು ಹೇಳಿಲ್ಲ, ಸಾಕ್ಷಿಗೆ ನಿಮಗೆ

ಹೊಡೆದಾಗ ನೀವು ಕಿರುಚಲು ಪ್ರಯತ್ನ ಪಟ್ಟರಾ ಎಂದು ಪ್ರಶ್ನಿಸಲಾಗಿ ಕಿರುಚಲು ಬಿಡಲಿಲ್ಲ ಎಂದು ನುಡಿದಿದ್ದಾರೆ. ನಾನು ನಿಲ್ಲಿಸಿದ್ದ ಲಾರಿ ಸ್ಥಳದಿಂದ ಟೋಲ್‌ನ ಬಳಿ ಇದ್ದವರಿಗೆ ನನ್ನ ಲಾರಿ ನಿಂತಿರುವುದು ಗೊತ್ತಾಗುತ್ತಿತ್ತು. ಟೋಲ್‌ನ ಬಳಿ ಇದ್ದವರು ರಕ್ಷಿಸಲು ಬರಲಿಲ್ಲ ಎಂದರೆ ನನಗೆ ಕೂಗಲು ಬಿಡಲಿಲ್ಲ. ಹಾಗೂ ಅವರಿಗೆ ಕಾಣಿಸುತ್ತಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಕಾರಿನ ನಂಬರ್ ನನಗೆ ಗೊತ್ತಿಲ್ಲ. ಆದರೆ ಸದರಿ ಕಾರು ಹೊಮಿನಿ ಕಾರು ಆಗಿರುತ್ತದೆ. ಕಾರಿನಲ್ಲಿ ಇಬ್ಬರು ಇದ್ದರು. ನನ್ನನ್ನು ಸುತ್ತಿಸಿದಾಗ ಕಾರಿನಲ್ಲಿ ಇಬ್ಬರೇ ಇದ್ದರು. ಸಾಕ್ಷಿಗೆ ಪೆಟ್ರೋಲ್ ಬಂಕ್‌ನ ಬಳಿ ಹೋದಾಗ ಪೆಟ್ರೋಲ್ ಬಂಕ್‌ರವರನ್ನು ಸಹಾಯಕ್ಕೆ ಕರೆದೆರಾ ಎಂದರೆ ಹೊಟ್ಟೆ ಮೇಲೆ ಚಾಕು ಇಟ್ಟಿದ್ದರು ಎಂದು ನುಡಿದಿದ್ದಾರೆ. ನನ್ನನ್ನು ಬಿಟ್ಟ ಸ್ಥಳದಲ್ಲಿ ಕಾರನ್ನು ನೋಡಿದೆ ಆದರೆ ಅದರ ನಂಬರ್‌ನ್ನು ಸರಿಯಾಗಿ ಗಮನಿಸಲಿಲ್ಲ. ಆ ದಿನ ಕಾರಿನಲ್ಲಿ ನನ್ನನ್ನು ಯಾರೂ ಆರೋಪಿಗಳು ಕರೆದುಕೊಂಡು ಹೋಗಿಲ್ಲ ಎನ್ನುವುದು ಸರಿಯಲ್ಲ. ಆದ್ದರಿಂದ ನಾನು ಕಾರ್ ನಂಬರ್ ನೋಡಲು ಆಗಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಕತ್ತಲು ಇತ್ತು ಬೋರ್ಡ್ ನೋಡಲು ಆಗಲಿಲ್ಲ ಎಂದು ನುಡಿದಿದ್ದಾರೆ. ಆ ದಿನ ನನ್ನ ಬಳಿ 50 ಸಾವಿರ ನಗದು ಹಣ ಇತ್ತು. 50 ಸಾವಿರದಲ್ಲಿ 500 ಮತ್ತು 1000 ಮುಖಬೆಲೆಯ ನೋಟುಗಳು ಇದ್ದವು. ಸದರಿ 50 ಸಾವಿರ ನಗದು ಹಣ ಲಾರಿ ಬಾಡಿಗೆ ಹಣ ಆಗಿತ್ತು. ಸದರಿ ಹಣ ಮೊದಲಿನಿಂದಲೂ ನನ್ನ ಬಳಿಯೇ ಇತ್ತು. ಮರಳನ್ನು ಆ ದಿನ ಚೆಕ್ ಮೂಲಕ ಖರೀದಿ ಮಾಡಿದ್ದೆ. ಸದರಿ ಚೆಕ್ ನಂಬರನ್ನು ದೂರಿನಲ್ಲಿ ನಮೂದು ಮಾಡಿಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಗೆ ಈ ಹಿಂದೆ ಎಲ್ಲಿ ನೋಡಿದ್ದೀರಾ ಎಂದರೆ ಲಾರಿಯಲ್ಲಿ ನೋಡಿದ್ದೇನೆ ಎಂದುನುಡಿದಿದ್ದಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದೂರು ಕೊಟ್ಟ ನಂತರ ನಾನು ಪೋಲೀಸ್ ಠಾಣೆಗೆ ಲಾರಿ ಬಿಡಿಸಿಕೊಳ್ಳಲು ಹೋಗಿದ್ದೆ. ದಿನಾಂಕಃ 16-01-2017ರಂದು ನೀವು ಪೋಲೀಸರಿಗೆ ಮರು ಹೇಳಿಕೆ ಕೊಟ್ಟಿದ್ದೀರಾ ಎಂದರೆ ಜ್ಞಾಪಕ ಇಲ್ಲ ಎಂದು ನುಡಿದಿದ್ದಾರೆ. ಸಾಕ್ಷಿಗೆ

ನಾನು ದೂರು ನೀಡುವಾಗ ಗಾಬರಿಯಲ್ಲಿ ಮರಳು ಮಾರಟ ಮಾಡಿದ್ದರಿಂದ ಬಂದ ಹಣವನ್ನು ಯಜಮಾನರಿಗೆ ಕೊಡಲು ಇಟ್ಟುಕೊಂಡಿದ್ದ ನಗದು ಹಣ 50 ಸಾವಿರ ರೂಗಳನ್ನು ಕಿತ್ತುಕೊಂಡು ಹೋಗಿರುತ್ತಾರೆಂದು ತಿಳಿಸಿದ್ದೆನು. ಆದರೆ ಮರುಳು ಮಾರಾಟ ಮಾಡಿದ್ದ ಸಮಯದಲ್ಲಿ ಅವರು ಮತ್ತೆ ಮರಳು ಬೇಕು ಬಂದಾಗ ಒಟ್ಟಿಗೆ ಹಣ ಕೊಡುವುದಾಗಿ ತಿಳಿಸಿ ಅಡ್ವಾನ್ಸ್ ಆಗಿ 6 ಸಾವಿರ ರೂಗಳನ್ನು ಕೊಟ್ಟಿದ್ದರು. ಇದು ನನಗೆ ಸರಿಯಾಗಿ ನೆನಪಿಲ್ಲದ ಕಾರಣ ಅವರು 50 ಸಾವಿರ ರೂ ಕೊಟ್ಟಿದ್ದು ಅದನ್ನು ಕಿತ್ತುಕೊಂಡು ಹೋಗಿರುತ್ತಾರೆಂದು ತಪ್ಪಾಗಿ ತಿಳಿದು ದೂರು ಕೊಟ್ಟಿದ್ದೆನು ಎಂದು ಮರು ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಆ ರೀತಿ ಹೇಳಿಲ್ಲ ಎಂದು ನುಡಿದಿದ್ದಾರೆ. ಸದರಿ ಭಾಗವನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಆ ದಿನ ಮೊದಲು ಪೋಲೀಸ್ ಠಾಣೆಗೆ ಹೋಗಿ ನಂತರ ಕೃತ್ಯ ನಡೆದ ಸ್ಥಳಕ್ಕೆ ಹೋಗಿದ್ದೆ. ಆ ದಿನ ನನ್ನ ಜೊತೆಯಲ್ಲಿ ಪೋಲೀಸರು ನನ್ನ ಮಾವ ಮತ್ತು ನನ್ನ ಮಾವನ ಸ್ನೇಹಿತ ಪುನೀತಾ ಮತ್ತು ನಮ್ಮ ಲಾರಿಯ ಮಾಲೀಕರು ಸ್ಥಳಕ್ಕೆ ಹೋಗಿದ್ದೆವು. ಜೊತೆಯಲ್ಲಿ ಇಬ್ಬರು ಪಿ.ಸಿಗಳೂ ಸಹ ಬಂದಿದ್ದರು. ಆ ದಿನ ಕೃತ್ಯ ನಡೆದ ಸ್ಥಳಕ್ಕೆ ಬೆಳಿಗೆ 9.45ರಿಂದ 10.00 ಗಂಟೆ ಸಮಯದಲ್ಲಿ ಹೋಗಿದ್ದೆವು. ಮಹಜರ್ ಸಮಯದಲ್ಲಿ ಬೇರೆ ಸಾರ್ವಜನಿಕರು ಯಾರೂ ಇರಲಿಲ್ಲ. ನಾನು ಮಹಜರ್‌ಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಮಹಜರ್‌ನಲ್ಲಿರುವ ವಿಷಯಗಳು ನನಗೆ ಗೊತ್ತಿದೆ. ನನ್ನ ಮಾವ ಮಹಜರ್‌ಗೆ ಸಹಿ ಮಾಡಿರಬಹುದು. ಮಹಜರ್‌ನ್ನು ಪೋಲೀಸರು ಬರೆದಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಮಹಜರ್‌ನ್ನು ಠಾಣೆಯಲ್ಲೇ ಬರೆದಿದ್ದಾರೆ ನಾನು ಠಾಣೆಯಲ್ಲೇ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಕೃತ್ಯ ನಡೆದ ಸ್ಥಳಕ್ಕೆ ನಾವ್ಯಾರು ಹೋಗಿರಲ್ಲಿಲ್ಲ ಎನ್ನುವುದು ಸರಿಯಲ್ಲ. ಆ ದಿನ ನಾನು ಯಾವುದೇ ಮರಳು ಸಾಗಾಣೆ ಮಾಡುತ್ತಿರಲ್ಲ ಮತ್ತು ಲಾರಿಯನ್ನು ಆ ದಿನ ನಾನು ನಿಲ್ಲಿಸಿಕೊಂಡಿರಲಿಲ್ಲ ಎನ್ನುವುದು ಸರಿಯಲ್ಲ. ಘಟನಾ ಸ್ಥಳದಲ್ಲಿ ಆರೋಪಿ ಇರಲಿಲ್ಲ ಎನ್ನುವುದು ಸರಿಯಲ್ಲ. ಪೋಲೀಸರು

ಹೇಳಿಕೊಟ್ಟ ರೀತಿ ದೂರು ತಯಾರು ಮಾಡಿದ್ದೇನೆ ಹಾಗೂ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಆರೋಪಿ 2 ಮತ್ತು 3ರ ವಕೀಲರಿಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ ಸಿ.ಎಸ್ 3ನೇ ಆರೋಪಿ ಪರ ವಕೀಲರಿಂದ ಃ**

ನಾನು ಕಳೆದ 5 ವರ್ಷಗಳಿಂದ ಮರುಳು ಸಾಗಣೆ ಮಾಡುತ್ತಿದ್ದೇನೆ. ಲಾರಿಯಲ್ಲೇ ಪರ್ಮಿಟ್ ಇತ್ತು ಅದನ್ನು ಆರೋಪಿಗಳೇ ಸುಟ್ಟು ಹಾಕಿದ್ದಾರೆ. ಬೇರೆ ಕಡೆಯಿಂದ ಮರುಳು ಸರ್ಜಾಪುರಕ್ಕೆ ಬರುತ್ತದೆ ಸರ್ಜಾಪುರದಿಂದ ನಾನು ಮರಳನ್ನು ಬೇರೆ ಕಡೆ ಸಾಗಾಣೆ ಮಾಡುತ್ತೇನೆ. ಆರೋಪಿಗಳಲ್ಲಿ ಎಷ್ಟು ಜನ ವಿದ್ಯಾರ್ಥಿಳಿದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಮೂರು ಜನ ಆರೋಪಿಗಳ ಹೆಸರು ಗೊತ್ತು ಅವುರುಗಳೆಂದರೆ ಮಹೇಶ ಅಜಯ್ ಮತ್ತು ಬಿಕಲಾ ಆಗಿರುತ್ತದೆ. ಆರೋಪಿಗಳನ್ನು ಲಾರಿಯಲ್ಲಿ ನೋಡಿದ್ದೇನೆ ಅವರ ಹೆಸರುಗಳು ಗೊತ್ತಿಲ್ಲ. ರಾಡು ಈ ದಿನ ನ್ಯಾಯೊಲಯದ ಮುಂದೆ ಇರುವುದಿಲ್ಲ. ಆರೋಪಿಗಳು ನನಗೆ ಆ ದಿನ ರಾಡ್‌ನಿಂದ ಹೊಡೆದಿಲ್ಲ ಎನ್ನುವುದು ಸರಿಯಲ್ಲ. ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರ್.ವಿ.ವಿ.ಎಂ 2ನೇ ಆರೋಪಿ ಪರ ವಕೀಲರಿಂದ ಃ**

ನಾನು ಈಗಲೂ ಸಹ ಚಾ.ಸಾ 2ರವರ ಬಳಿ ಚಾಲಕನ ಕೆಲಸ ಮಾಡುತ್ತಿದ್ದೇನೆ. ಈಗ ನನ್ನ ಬಳಿ ನನ್ನ ಡಿ.ಎಲ್ ಇರುವುದಿಲ್ಲ ಆರ್.ಟಿ.ಒ ಕಛೇರಿಗೆ ಕೊಟ್ಟಿದ್ದೇನೆ. ನಾನು ಸರ್ಜಾಪುರ ಚಿಕ್ಕತಿರುಪತಿ ರಸ್ತೆಯಲ್ಲಿ ಸುಮಾರು 5 ರಿಂದ 6 ಬಾರಿ ಓಡಾಡಿದ್ದೇನೆ. ಮಾರನೇ ದಿನ ಬೆಳಿಗ್ಗೆ ಸುಮಾರು 7.30ಗಂಟೆ ಸ್ಟೇಷನ್‌ಗೆ ಹೋಗಿದ್ದೆ. ಪೋಲೀಸ್ ಠಾಣೆಯಲ್ಲಿ ನಾನು ಸಂಜೆ 7.00ಗಂಟೆವರೆಗೂ ಇದ್ದೆ. ಆ ಮಧ್ಯದಲ್ಲಿ ನಾನು ಪೋಲೀಸರ ಜೊತೆ ಹೊರಗಡೆ ಹೋಗಿದ್ದೆ.

ಮಾಲೀಕರು ಬೆಳಿಗೆ 7.00ಗಂಟೆಗೆ ಪೋಲೀಸ್ ಠಾಣೆ ಬಳಿ ಬಂದಿದ್ದಾರೆ. ಅದೇ ದಿನ ಸಂಜೆ 5 ಗಂಟೆಗೆ ಪೋಲೀಸ್ ಠಾಣೆಯಲ್ಲಿ ನನಗೆ ಆರೋಪಿಗಳನ್ನು ತೋರಿಸಿದ್ದಾರೆ. ನಾನು ಗಂಗಾಧರ್ ಮೂಲಕವೇ ನಮ್ಮ ಮಾಲೀಕರ ಬಳಿ ಕೆಲಸಕ್ಕೆ ಸೇರಿದೆ ಎನ್ನುವುದು ಸರಿ. ಗಂಗಾಧರ್ ಮತ್ತು ನಮ್ಮ ಮಾಲೀಕರು ಸ್ನೇಹಿತರು ಎನ್ನುವುದು ಸರಿ. ಲಾರಿಯಲ್ಲಿ ಒಟ್ಟು ನಾಲ್ಕು ಜನ ಹತ್ತಿದ್ದರು. ಆ ನಂತರ ಆ ನಾಲ್ಕು ಜನರು ನನ್ನ ಮುಖವನ್ನು ಬೆಡ್ ಶೀಟ್‌ನಲ್ಲಿ ಮುಚ್ಚಿದ್ದರು. ನನಗೆ ಮುಖ ಮುಚ್ಚಿದ್ದರಿಂದ ಬೇರೆ ಏನೂ ಕಾಣಿಸುತ್ತಿರಲಿಲ್ಲ, ನೈಸ್ ರೋಡ್‌ನಲ್ಲಿ ಹೋಗುತ್ತಿರುವುದು ಗೊತ್ತಾಯಿತು. ನಂತರ ನನ್ನನ್ನು ಇಳಿಸಿದ ಜಾಗದಲ್ಲಿ ನನಗೆ ಹೊರಗಿನ ಪ್ರಪಂಚ ಗೊತ್ತಾಯಿತು ಎನ್ನುವುದು ಸರಿ. ಲಾರಿಯಲ್ಲಿದ್ದ ಇಬ್ಬರು ಆಸಾಮಿಗಳು ನನ್ನನ್ನು ಲಾರಿಯಿಂದ ಕೆಳಗೆ ಇಳಿಸಿ ಕಾರಿನಲ್ಲಿ ಕುಳ್ಳಿರಿಸಿಕೊಂಡರು ಎಂದು ದೂರನಲ್ಲಿ ಹೇಳಿದ್ದೇನೆ. ನಾನು ಹಣದ ಆಸೆಗೋಸ್ಕರ ನಮ್ಮ ಮಾಲೀಕರ ಬಳಿ ಇದ್ದ ಮರುಳು ತುಂಬಿದ ಲಾರಿಯನ್ನು ಕದ್ದು ಬೇರೆ ಕಡೆ ನಿಲ್ಲಿಸಿಕೊಂಡಿದ್ದೆ ಎನ್ನುವುದು ಸರಿಯಲ್ಲ, ಗಂಗಾಧರ್‌ರವರು ಮತ್ತು ನಿಮ್ಮ ಮಾಲೀಕರು ಸೇರಿ ನಿಮ್ಮನ್ನು ಪೊಲೀಸ್ ಠಾಣೆಯಲ್ಲೇ ಕುಳಿತುಕೊಳ್ಳುವಂತೆ ಮಾಡಿದ್ದರು ಆ ಮೋದಲೇ ಠಾಣೆಯಲ್ಲಿದ್ದ ಆರೋಪಿಗಳ ಮೇಲೆ ಪೋಲಿಸರು ನಿಮ್ಮನ್ನು ಬಚಾವು ಮಾಡಲು ನಿಮ್ಮ ಮಾಲೀಕರ ಜೊತೆ ಶಾಮೀಲಾಗಿ ಸುಳ್ಳು ಕೇಸು ಮಾಡಿದ್ದಾರೆ ಎಂದರೆ ನೀವು ಹೇಳುತ್ತಿರುವುದು ಸುಳ್ಳು ಎಂದು ನುಡಿದಿದ್ದಾರೆ. ಪೋಲೀಸರು ಠಾಣೆಯಲ್ಲಿ ಆರೋಪಿಗಳ ಗುರುತು ಕವಾಯತ್ತು ಮಾಡಿರುವುದಿಲ್ಲ, ನಾನು ಪೋಲೀಸ್ ಠಾಣೆಯಲ್ಲಿ ಎಷ್ಟು ಸಹಿ ಮಾಡಿದ್ದೇನೆ ಎಂದು ಹೇಳಲು ಜ್ಞಾಪಕ ಇರುವುದಿಲ್ಲ ಎರಡು ಅಥವಾ 3 ಮಾಡಿರಬಹುದು ಎಂದು ನುಡಿದಿದ್ದಾರೆ.

**ಮರುವಿಚಾರಣೆ ಃ ಇಲ್ಲ**

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

**(ಜೆ.ವಿ ವಿಜಯಾನಂದ)**
9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.